ಅ) ಇದರಲ್ಲಿ ಪರಿಶಿಷ್ಟ ಜಾತಿ/ವರ್ಗದವರಿಗೆ ಎಷ್ಟು ಪ್ರಮಾಣದಲ್ಲಿ ಕೊಡಲು ಕಾನೂನು ಇದೆ, ಇದರಂತೆ ಭೂ ರಹಿತ ರೈತರಿಗೆ ಭೂಮಿ ವಿತರಣೆ ಮಾಡಲಾಗಿದೆಯೆ?

ಇ) ಹಾಗಿಲ್ಲದಿದ್ದಲ್ಲಿ ಈ ವರ್ಗದ ಜನರಿಗೆ ಯಾವ ರೀತಿ ಸಹಾಯ ಮಾಡಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) 1,108.06 ಎಕರೆ

ಆ) ಪರಿಶಿಷ್ಟ ಜಾತಿ/ವರ್ಗದವರಿಗೆ ನಿಯಮಗಳ ಅನುಸಾರ ಲಭ್ಯವಿರುವ ಜಮೀನಿನ ಶೇಕಡ 50ರ ಪ್ರಮಾಣದಲ್ಲಿ ವಿತರಣೆ ಮಾಡಲು ಅವಕಾಶವಿದೆ. ಅದರಂತೆ ವಿತರಣೆ ಮಾಡಲಾಗುತ್ತದೆ.

ಇ) ಉದ್ಭವಿಸುವುದಿಲ್ಲ.

ವರದಾ ಶುಗರ್ಸ್ ಮಸ್ಕೂರದಂಬರ್ ಇದಕ್ಕೆ ಸಾಲ ಮಂಜೂರು

4870 - ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಕೆ.ಸಿ.ಸಿ. ಬ್ಯಾಂಕಿನವರು ವರದಾ ಶುಗರ್ಸ್ ಮಸ್ಕೂರದಂಬರ್ ಸವಣೂರು ತಾಲ್ಲೂಕು ಇವರಿಗೆ ಎಷ್ಟು ಮೊತ್ತದ ಹಣವನ್ನು ಸಾಲವಾಗಿ ಮಂಜೂರು ಮಾಡಿರುತ್ತಾರೆ?

ಆ) ಈ ಸಾಲ ಮಂಜೂರಾದಾಗ ಈ ಶುಗರ್ಸ್ ಫ್ಯಾಕ್ಟರಿಯಲ್ಲಿ ಯಾರು ಯಾರು ಪಾಲುದಾರರು ಇದ್ದಾರೆ?

ಇ) ಈ ಸಾಲ ಮರುಪಾವತಿ ಆಗಿದೆಯೇ?

ಈ) ಸಾಲ ಮರುಪಾವತಿ ಆಗದಿದ್ದಲ್ಲಿ ಕಾರಣಗಳೇನು?

ಉ) ಸಾಲ ಮರು ವಾಪಸ್ ಪಡೆಯಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಕೆ.ಸಿ.ಸಿ. ಬ್ಯಾಂಕ್ ಧಾರವಾಡ ಇವರು ವರದಾ ಶುಗರ್ಸ್ ಮಸ್ಕೂರದಂಬರ್ ಸವಣೂರು ತಾಲ್ಲೂಕು ಇದಕ್ಕೆ ಒಟ್ಟು ರೂ. 261.61 ಲಕ್ಷ ಸಾಲ ಮಂಜೂರು ಮಾಡಿರುತ್ತಾರೆ.

ಆ) ಸಾಲ ಮಂಜೂರಾದಾಗ ಈ ಕೆಳಕಂಡವರು ಶುಗರ್ಸ್ ಫ್ಯಾಕ್ಟರಿಯಲ್ಲಿ ಪಾಲುದಾರರಾಗಿದ್ದರು.

ಶ್ರೀಮತಿ : ಶ್ರೀ

1) ಎಸ್.ಬಿ. ಪಾಟೀಲ್
2) ಬಿ.ಪಿ. ಪಂಚಾಕ್ಷರಿಮಠ
3) ಎಸ್.ಎಸ್. ಹಿರೇಮಠ
4) ಪಿ.ಎಸ್. ಕಟಕೋಳ
5) ಎಸ್.ವಿ. ಪಟ್ಟಣಶೆಟ್ಟಿ
6) ಸಿ.ಬಿ. ಕೋರಿಶೆಟ್ಟರ್
7) ಎಚ್.ಎನ್. ಸಜ್ಜನರ
8) ಸಿ.ಜಿ. ಮಹಾರಾಜವೇರ
9) ಎಸ್.ಎಸ್. ಪಾಟೀಲ್ (ಮುಂಡರಗಿ)
10) ವೈ.ಬಿ. ಬಸವಗೌಡರ
11) ಎಸ್.ಬಿ. ಪವಾರ
12) ಜಿ.ಎಸ್. ಉಪನಾಳ
13) ಆರ್.ಎಸ್. ಬಸಾಪುರ
14) ಎಸ್.ಪಿ. ಸಜ್ಜನರ
15) ಪದ್ಮನಾಭ ಪೂಜಾ
16) ಎಂ.ವಿ. ಸಾನು
17) ಎಸ್.ಎಸ್. ಪಾಟೀಲ್ (ಹುಬ್ಬಳ್ಳಿ)
18) ಬಿ.ಸಿ. ಚನ್ನವೀರಪ್ಪನವರ
19) ಎಸ್.ಪಿ. ಕಟಕೋಳ
20) ಎನ್.ಬಿ. ಶಿವಣ್ಣನವರ
21) ಎನ್.ಜಿ. ಪಂಚಾಕ್ಷರಿಮಠ
22) ವಿ.ಎಸ್. ಪಟ್ಟಣಶೆಟ್ಟಿ
23) ಎ.ಸಿ. ಉರಣಕರ

ಇ) ಇಲ್ಲ

ಈ) ಘಟಕವು ಸ್ಥಗಿತಗೊಂಡಿರುವುದರಿಂದ ಸಾಲದ ಮರುಪಾವತಿ ಆಗಿರುವುದಿಲ್ಲ.

ಉ) ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಳಗಾವಿ ವಿಭಾಗ, ಬೆಳಗಾವಿ, ಇವರ ಮುಂದೆ ಸಹಕಾರ ಸಂಘಗಳ ಕಾಯ್ದೆ ಕಲಂ 70 ರಡಿಯಲ್ಲಿ ದಾವೆ ಹೂಡಲಾಗಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ರಸ್ತೆಗಳ ಅಭಿವೃದ್ಧಿ

4872 - ಶ್ರೀ ಲಿಂಗಪ್ಪ ಸಿ.ಎಂ. (ರಾಮನಗರ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರಾಟ ಮಹಾಮಂಡಳಿವತಿಯಿಂದ ಈ ಹಿಂದೆ ತಾಲ್ಲೂಕಿಗೆ ರೂ. 50.00 ಲಕ್ಷಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದು ನಿಜವಲ್ಲವೆ?

ಆ) ಈ ಕಾರ್ಯಕ್ರಮದಿಂದ ಗ್ರಾಮಾಂತರದ ಅನೇಕ ರಸ್ತೆಗಳು ದುರಸ್ತಿಯಾದದ್ದು ನಿಜವಲ್ಲವೇ?

ಇ) ಇದೇ ರೀತಿ ಮುಂದಿನ 4 ವರ್ಷಗಳಲ್ಲಿ ವಾರ್ಷಿಕ ರೂ. 20.00 ಲಕ್ಷಗಳಂತೆ ಪ್ರತಿ ತಾಲ್ಲೂಕಿನಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆಯೇ?

ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :